ಅದೆಂಥಾ ಕತೆಗಳು ಇರಬಹುದೆಂದುಕೊಂಡಳು.

ಅಲ್ಲೇ ಒಂದು ಪುಸ್ತಕ ತೆಗೆದು ಅದರೊಳಗಿನ ಅಕ್ಷರಗಳನ್ನೂ, ಚಿತ್ರಗಳನ್ನೂ ಮುಟ್ಟಿ ಮುಟ್ಟಿ ನೋಡುತ್ತಿದ್ದ ಕೊಂಗುನಾದನನ್ನು ಕುರಿತು, ಅದಾಗ ರಾತ್ರಿಯ ಅನ್ನ ತಂದಿದ್ದ ಕಣ್ಣಾಸೆಲ್ವಿ ಏನೋ ನೆನಪಿಸಿಕೊಂಡವಳಂತೆ, 'ಮಾಮಾ ಸ್ಪೇಷನ್ನುಕ್ಕುಳ್ಳೆ ಎನ್ನ ಸಾಪಾಡು ಕುಡುತ್ತಾರು' ಅಂದಳು. 'ತಂಗಚ್ಚಿ ರೊಂಬ ನಲ್ಲ ಇರಂದದು. ದಿನಮೂ ಉಪ್ಪಮಾ, ಇಡ್ಲಿ, ಚಟ್ಟಣಿ, ಎಲ್ಲ ಕುಡುತ್ತಾರು' ಅಂದವನು ಆಗಾಗ ಮೈಮೇಲಿನ ಕೆಂಪು ಬಾಸುಂಡೆಗಳನ್ನು ಸವರಿಕೊಳ್ಳುತ್ತಿದ್ದ. ಇತ್ತ ಪೆಟ್ಟಿಗೆಯೊಳಗಿನ ಪುಸ್ತಕದ ಹಾಳೆಗಳನ್ನು ತೆಗೆದು ತೋರಿಸುತ್ತಿದ್ದ ತಂಗಮಣಿ, 'ಎನಕ್ಕೂ ಅದೇ ಸಾಪ್ಪಾಡು ಕುಡುತ್ತಾರು ಪುಳ್ಳೆ' ಅಂದ. ಅಲ್ಲಿಯೇ ಇದ್ದ ಸಿಂಗನಾದ ಆಹಾಹಾ ನನಗೆ ಎಲ್ಲವೂ ಗೊತ್ತು, ಹೆಣ ಅಗೆದವರು ಯಾರು, ಸಾಗಿಸಿದವರು ಯಾರು, ಅಲ್ಲಿಂದ ಆಂಬುಲೆನ್ಸ್ ವ್ಯಾನು ಎಲ್ಲಿ ಹೋಯಿತು, ಯಾವ ದಿಕ್ಕಿಗೆ ಹೋಯಿತು ಅಂತ ಎಲ್ಲಾಮೆ ತೆರಿಯುಮ್. ಈಗಲೂ ಕರೆದುಕೊಂಡು ಹೋದರೆ ಎಲ್ಲರನ್ನೂ ಹಿಡಿದುಕೊಡುವೆ, ಯಾವುದೇ ಕೋರ್ಟಿನಲ್ಲಿ ಬೇಕಾದರೂ ಸಾಕ್ಷಿ ಹೇಳುವೆನೆಂದು ಭೂಮಿಯತ್ತಲೊಮ್ಮೆ, ಆಕಾಶದತ್ತಲೊಮ್ಮೆ, ಯರ್ರ್ಯಾರನ್ನೋ ಉದ್ದೇಶಿಸಿ ಅಸಾಧ್ಯ ಸಿಟ್ಟಿನಿಂದ ಬೈಗುಳ ಏರಿಸುತ್ತಲೇ ಇತ್ತು. ಅದರ ಬೊಗಳುವಿಕೆಯ ಬೈಗುಳಲ್ಲಿ ಯಾರ್ರ್ಯಾರ ಮುಖಚಹರೆ, ನಿಜನಾಮಧೇಯ ಇದ್ದಿತೋ ಗುರುತಿಸಿ ಇಲ್ಲಿ ಹೇಳುವುದು ಕೊಂಚ ಕಷ್ಟ.

ತಂಗಮಣಿಯು ಪೆಟ್ಟಿಗೆಯೊಳಗಿನ ಒಂದು ಪುಟ್ಟ ಪುಸ್ತಕದ ಹಾಳೆಯನ್ನು ತೆರೆದು ಅಲ್ಲಿನ ವಾಕ್ಯವನ್ನು ತೋರಿಸಿ, ಕಣ್ಣಾಪುಳ್ಳೆ, 'ಇದಾ ಪಡಿ' ಎಂದ. ಅವಳು ಒಂದೊಂದಾಗಿ ಅಕ್ಷರ ಕೂಡಿಸಿ ಓದುವಲ್ಲಿ ತಂಗಮಣಿ, 'ತಾಯಿ ಸರಸ್ವತಿಯೇ, ನಿನ್ನ ಮೈಮೇಲಿನ ಮುತ್ತು, ರತ್ನ, ಮರಕತ, ಮಾಣಿಕ್ಯದ ಆಭರಣಗಳೆಂದರೆ ಬೇರಿನ್ನೇನು? ಅಕ್ಷರಗಳೇ ಅಲ್ಲವೆ?... ಅವುಗಳ ಕಾಂತಿಯ ಬೆಳಕನ್ನು ನಮಗೂ ಕರುಣಿಸುವವಳಾಗು. ಆ ದೀಪದ ಅಡಿಯಲ್ಲಿ ನಾನು ಈ ಮುಂದಿನ ಕಥೆಯನ್ನು ಲೋಕದ ಜನಕ್ಕೆ ಹೇಳುವಂಥವನಾಗುತ್ತೇನೆ' ಎಂದು ಆರಂಭವಾಗುವ ಆ ಪುಸ್ತಕ ಕಥನ ವಾಕ್ಯಗಳ ಮೇಲೆ ಮಗಳ ಕೈಬೆರಳು ಇರಿಸಿ ಓದಿಸಲು ತೊಡಗಿದ. ಕಣ್ಣಾಸೆಲ್ವಿಯು, ಕೊಂಗುನಾದನು ತಮಗೆ ಆ ವಾಕ್ಯವು ಅರ್ಥವಾಯಿತೆನ್ನುವಂತೆ, 'ಆಮಾವಾ ಅಪ್ಪಾ, ಅಪ್ಪಡಿಯಾ ಅಣ್ಣೇ' ಎಂದು ಒಟ್ಟಿಗೆ ತಲೆಯಾಡಿಸತೊಡಗಿದರು. ಅಲ್ಲಿಂದ ಮುಂದೆ ತಂಗಮಣಿ ಇಬ್ಬರಿಗೂ ಆ ಪುಸ್ತಕದ ಕಥೆಯನ್ನು ಓದಿ ಹೇಳಲು ಆರಂಭಿಸಿದ...

## ಕೃಷ್ಣಮೂರ್ತಿ ಹನೂರು

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ (ಚಾಮರಾಜ ನಗರ) ಸಂದರ್ಶಕ ಪ್ರಾಧ್ಯಾಪಕರು. 'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ', 'ಕಳೆದ ಮಂಗಳವಾರ ಮುಸ್ಸಂಜೆ' ಎಂಬ ಕಥಾಸಂಕಲನಗಳನ್ನು, 'ಬಾರೋ ಗೀಜಗನೆ', 'ನಿಕ್ಷೇಪ', 'ಅಜ್ಞಾತನೊಬ್ಬನ ಆತ್ಮಚರಿತ್ರೆ', 'ಸಿದ್ಧಿಯ ಕೈ ಚಂದ್ರನತ್ತ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರಗೊಂಡಿದೆ. ಜಾನಪದಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. 'ಕಾಲುದಾರಿಯ ಕಥನಗಳು' ಅವರ ಜಾನಪದ ಕ್ಷೇತ್ರ ಕಾರ್ಯದ ಅನುಭವ ಕಥನವಾಗಿದೆ.